# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 174-ಹೆಚ್.ಎಸ್.ಆರ್ ಬಡಾವಣೆ,

## Ward DETER Commitee

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ. (ಎಸ್.ಡಬ್ಲ್ಯೂ.ಡಿ) ರವರು ದಿನಾಂಕ: 06.07.2021 ರಂದು ಸಂಜೆ 03:00 ಘಂಟೆಗೆ Ward DETER Commitee ಅನ್ನು 174-ಹೆಚ್.ಎಸ್.ಆರ್ ಬಡಾವಣೆ, ವಾರ್ಡ್ ಕಛೇರಿ (ಹೆಚ್.ಎಸ್.ಆರ್ ಉಪವಿಭಾಗ) ರಲ್ಲಿ ನಡೆಸಿದ್ದ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಬಿ.ಚಂದ್ರಶೇಖರ್ | ವಾರ್ಡ್ ನೋಡಲ್ ಅಧಿಕಾರಿ ಸ.ಕಾ.ನಿ.ಅ. (ಎಸ್.ಡಬ್ಲ್ಯೂ.ಡಿ) | 9448376415 |
| 2 | ಶ್ರೀ ರಾಮೇಗೌಡ.ಕೆ.ಎಸ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ಸಂ.174 | 7795356105 |
| 3 | ಶ್ರೀ ಬಿ.ಎಂ ರಮೇಶ್ | ಸದ್ಯಸರು | 9886619048 |
| 4 | ಶ್ರೀ ಹೆಚ್.ಇ.ಚಂದ್ರಶೇಖರ್ | ಸದ್ಯಸರು | 9880987339 |
| 5 | ಶ್ರೀ ರಾಮಚಂದ್ರ | ಸದ್ಯಸರು | 9845056649 |
| 6 | ಶ್ರೀ ವರಹ ವೆಂಕಟೇಶ್ | ಸ್ವಯಂ ಸೇವಕರು | 9886717376 |
| 7 | ಶ್ರೀ ಆರ್ ಕೇಶವ್ ರೆಡ್ಡಿ | ಸ್ವಯಂ ಸೇವಕರು | 9341251360 |
| 8 | ಶ್ರೀ ಟಿ.ಹನುಮಂತರಾಯು | ಸಹಾಯಕ ಕಾರ್ಯನಿರ್ವಹಕ ಅಭಿಯಂತರರು (ಹೆಚ್.ಎಸ್.ಆರ್ ಬಡಾವಣೆ) | 8105005285 |
| 9 | ಶ್ರೀಮತಿ ಡಾ|| ಎಸ್ ಲಾವಣ್ಯ ಶೆಟ್ಟಿ | ಪ್ರಾ.ಆ.ಕೇಂ (ವೈದ್ಯರು) | 8971042985 |
| 10 | ಶ್ರೀ ವಿನೋದ್.ಜಿ | ಹಿ.ಆ.ಪ ವಾ.ಸಂ: 174 | 9844629911 |
| 11 | ಶ್ರೀ ಸಾಯಿಬಣ್ಣ | ಸ.ಅ (ಬಿ.ಡಬ್ಲ್ಯೂ.ಎಸ್.ಎಸ್.ಬಿ) | 9845444039 |
| 12 | ಶ್ರೀ ಹೆಚ್.ನರಸಪ್ಪ | ತೋಟಗಾರಿಕೆ ಸಹಾಯಕರು | 8105663239 |

Scanned with

- ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರು ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಲಾಗಿದ್ದು ವಾರ್ಡ್ ವ್ಯಾಪ್ತಿಯಲ್ಲಿ ಸದ್ಯಸರು, ಸ್ವಯಂ ಸೇವಕರು ಮತ್ತು ಅಧಿಕಾರಿಗಳ ಸಹಾಕರದೊಂದಿಗೆ ಕೋವಿಡ್-19 ಹರಡುವಿಕೆಯು ಈ ವಾರ್ಡ್‌ನಲ್ಲಿ ಇಳಿಮುಖವಾಗಿದೆ ಎಂದು ತಿಳಿಸಿರುತ್ತಾರೆ.
- ಶ್ರೀ ಡಾ|| ಎಸ್ ಲಾವಣ್ಯ ಶೆಟ್ಟಿ ರವರು ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸೊಂಕಿತರ ಪ್ರಕರಣವನ್ನು ವಿವರಿಸುತ್ತಾ ದಿನಾಂಕ: 11.06.2021 ರಿಂದ ಇಲ್ಲಿಯವರಿಗೆ ಒಟ್ಟು 28 ಪ್ರಕರಣಗಳು ವರದಿಯಾಗಿರುವುದಾಗಿ ಸಭೆಗೆ ತಿಳಿಸಿದ್ದರು.
    1) ಒಟ್ಟು 22 ಸೊಂಕಿತರವರನ್ನು HI's ಇಲ್ಲಿದ್ದರೆ, ಇವರಿಗೆ ಬಿ.ಬಿ.ಎಂ.ಪಿ ವತಿಯಿಂದ Medical Kit ಅನ್ನು ಒದಗಿಸಿದ್ದು, HI's ಅಲ್ಲಿ ಇರುವವರಿಗೆ ದಿನಾಲು ಅವರ ಯೋಗಕ್ಷೇಮವನ್ನು ಕರೆ ಮಾಡಿ ವಿಚಾರಿಸುತ್ತಿದ್ದೇವೆ ಎಂದು ಹಾಜರಿದ್ದ ವೈದ್ಯರು ಸಭೆಗೆ ತಿಳಿಸಿರುತ್ತಾರೆ.
    2) 06 ಸೊಂಕಿತರವರನ್ನು Hospitilize ಮಾಡಲಾಗಿದೆ.(Including Oxygen Bed, ICU Bed & others)
    3) ಒಟ್ಟು 28 ಪ್ರಕರಣಗಳಲ್ಲಿ ಸೋಮಸುಂದ್ರಪಾಳ್ಯ ಗ್ರಾಮದ ಒಂದೇ ಮನೆಯಲ್ಲಿ ಒಟ್ಟು 03 ಪ್ರಕರಣಗಳು ಹಾಗೂ ಇಬ್ಬಲೂರು ಗ್ರಾಮದ ಒಂದೇ ಮನೆಯಲ್ಲಿ ಒಟ್ಟು 04 ಪ್ರಕರಣಗಳು ಕೋವಿಡ್ ಡೆಲ್ಟಾ ಪ್ಲಸ್ ಲಕ್ಷಣಗಳು ಕಾಣಿಸಿಕೊಂಡಿದ್ದು ಫಲಿತಾಂಶಕ್ಕಾಗಿ ಡೆಲ್ಲಿ ಗೆ ಕಳುಹಿಸಲಾಗಿದ್ದು 15 ದಿನಗಳ ನಂತರ ಡೆಲ್ಟಾ ಪ್ಲಸ್ ಲಕ್ಷಣಗಳ ಇದೇ ಅಥವಾ ಇಲ್ಲ ಇಂಬ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳಲಾಗುವುದು.
    4) ಈ ವಾರ್ಡ್‌ನಲ್ಲಿ ದಿನಾಂಕ: 11.06.2021 ರಿಂದ ಇಲ್ಲಿಯವರಿಗೆ ಒಬ್ಬರುಕೂಡ ಕೋವಿಡ್-19 ಪ್ರಕರಣದಿಂದ ಮೃತ ಪಟ್ಟಿರುವುದಿಲ್ಲವೆಂದು ವೈದ್ಯರು ಸಭೆಗೆ ತಿಳಿಸಿರುತ್ತಾರೆ.
- ವಾರ್ಡ್ ವ್ಯಾಪ್ತಿಯ ಪರಂಗಿಪಾಳ್ಯದಲ್ಲಿ ಹೊಸದಾಗಿ ಚರಂಡಿ ಕಲ್ವರ್ಟ್ ಮತ್ತು ಡಾಂಬರೀಕರಣ ಕಾಮಗಾರಿ ನಿರ್ವಹಿಸಲು ಶ್ರೀ ರಾಮಚಂದ್ರ, ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಕ್ರಿಯಾಯೋಜನೆ ತಯಾರಿಸಿದ್ದು, ಕಾರ್ಯದೇಶ ನೀಡಿದ ನಂತರ ಕ್ರಮ ಕೈಗೊಳ್ಳಲಾಗುವುದೆಂದು ಸ.ಅ. ರವರು ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಮದೀನನಗರದಲ್ಲಿ ಕಲ್ವರ್ಟ್ ಅನ್ನು ಸರಿಪಡಿಸುವಿಕೆ ಬಗ್ಗೆ ಶ್ರೀ ರಾಮಚಂದ್ರ, ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಕ್ರಮವಹಿಸಲಾಗುವುದೆಂದು ಸ.ಅ, (ಬಿಬಿಎಂಪಿ) ವಾರ್ಡ್ 174 ರವರು ವಾರ್ಡ್ ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ 19ನೇ ಮುಖ್ಯ ರಸ್ತೆ, 25ನೇ ಅಡ್ಡ ರಸ್ತೆ ಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಅವಶೇಷಗಳನ್ನು ಸುರಿಯುತ್ತಿದ್ದರೆ ಎಂದು ಶ್ರೀ ಹೆಚ್.ಇ.ಚಂದ್ರಶೇಖರ್, ಸದ್ಯಸರು ತಿಳಿಸಿದ್ದು. ಈ ಬಗ್ಗೆ 2 ಅಥವಾ 3 ದಿನಗಳಲ್ಲಿ ಕ್ರಮವಹಿಸಲಾಗುವುದೆಂದು ಶ್ರೀ ಸಾಯಿಬಣ್ಣ, ಸ.ಅ (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರು ವಾರ್ಡ್ ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಮರಗಳ ಕೊಂಬೆಗಳು, ಎಲೆಗಳು ರಸ್ತೆಯಲ್ಲಿ ಬಿದಿದ್ದು ಇದನ್ನು ತೆರವುಗೊಳಿಸಲು ಶ್ರೀ ಹೆಚ್.ಇ.ಚಂದ್ರಶೇಖರ್, ಸದ್ಯಸರು ಮತ್ತು ಶ್ರೀ ವರಹ ವೆಂಕಟೇಶ್, ಸ್ವಯಂ ಸೇವಾಕರು ಸಭೆಗೆ ತಿಳಿಸಿದ್ದು, ಈ ಬಗ್ಗೆ ಸಭೆಗೆ ಗೈರು ಹಾಜರಿದ್ದ ವಲಯ ಅರಣ್ಯ ಅಧಿಕಾರಿಗಳಿಗೆ ಮುಂದಿನ ಸಭೆಗೆ ಹಾಜರಾಗುವಂತೆ ಕಾರ್ಯದರ್ಶಿ ರವರಿಗೆ ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸೂಚಿಸಿದರು.

Scanned with

- ನಮ್ಮ ಬೆಂಗಳೂರು Sahaaya 2 ರಲ್ಲಿ ಬೀದಿ ನಾಯಿಗಳ ಮತ್ತು ಹಂದಿಗಳ ಬಗ್ಗೆ ದೂರು ನೀಡಿದ್ದರು ಸಂಬಂಧಪಟ್ಟ ಅಧಿಕಾರಿಗಳು ಸ್ಪಂದಿಸುತ್ತಿಲವೆಂದು ಶ್ರೀ ಹೆಚ್.ಇ.ಚಂದ್ರಶೇಖರ್, ಸದ್ಯಸರು ಮತ್ತು ಶ್ರೀ ವರಹ ವೆಂಕಟೇಶ್, ಸ್ವಯಂ ಸೇವಾಕರು ಸಭೆಗೆ ತಿಳಿಸಿದ್ದು, ಈ ಬಗ್ಗೆ ಪಶುಸಂಗೋಪಾನೆ ಇಲಾಖೆಯ ಅಧಿಕಾರಿಗಳು ಸಭೆಗೆ ಗೈರು ಹಾಜರಾಗಿದ್ದು ಮುಂದಿನ ಸಭೆಗೆ ಹಾಜರಾಗುವಂತೆ ಕಾರ್ಯದರ್ಶಿ ರವರಿಗೆ ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸೂಚಿಸಿದ್ದರು.
- ಸದರಿ ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಾ ಉದ್ಯಾನವನಗಳಲ್ಲಿ ಎಲೆಗಳು, ಕೊಂಬೆಗಳು ಉದ್ಯಾನವನದಿಂದ ಹೊರಗಡೆ ಎಸೆದಿರುವುದಾಗಿ ಶ್ರೀ ಹೆಚ್.ಇ.ಚಂದ್ರಶೇಖರ್, ಸದ್ಯಸರು ಮತ್ತು ಶ್ರೀ ವರಹ ವೆಂಕಟೇಶ್, ಸ್ವಯಂ ಸೇವಾಕರು ಸಭೆಗೆ ತಿಳಿಸಿದ್ದು, ಈ ಬಗ್ಗೆ ಸದರಿ ಉದ್ಯಾನವನಗಳ ಏಜೆನ್ಸಿ ರವರನ್ನು ಮುಂದಿನ ಸಭೆಗೆ ಹಾಜರಾಗುವಂತೆ ಕಾರ್ಯದರ್ಶಿ ರವರಿಗೆ ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಹೊಸದಾಗಿ ಡಾಂಬರೀಕರಣ ಮಾಡಿರುವ ರಸ್ತೆಗಳನ್ನು ಅಗೆದು ಸ್ಯಾನಿಟರಿ ಪೈಪ್ ಕಾಮಗಾರಿಯನ್ನು ಕೈಗೊಂಡಿದ್ದು, ಬಿ.ಬಿ.ಎಂ.ಪಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಬೆಸ್ಕಾಂ ವಿಭಾಗದವರಲ್ಲಿ ಸಮನ್ವಯ ಇಲ್ಲದಿರುವುದು ಶ್ರೀ ಹೆಚ್.ಇ.ಚಂದ್ರಶೇಖರ್, ಸದ್ಯಸರು ಮತ್ತು ಶ್ರೀ ವರಹ ವೆಂಕಟೇಶ್, ಸ್ವಯಂ ಸೇವಾಕರು ಮತ್ತು ಇತರರು ಸಭೆಯಲ್ಲಿ ಆಕ್ಷೇಪಿಸಿದ್ದು, ಈ ಬಗ್ಗೆ ಬಿ.ಬಿ.ಎಂ.ಪಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಬೆಸ್ಕಾಂ ವಿಭಾಗದವರು ಜಂಟಿಯಾಗಿ ಯಾವುದೇ ಒಂದು ರಸ್ತೆಯನ್ನು ಅಗೆಯುವ ಮುಂಚೆ ಸ್ಥಳವನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳಲು ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸೂಚಿಸಿದರು.

ಅಂತಿಮವಾಗಿ ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ರವರು, ವಾರ್ಡ್ ನಂ. 174 ಹಾಗೂ ಸ.ಕಾ.ನಿ.ಅ. (ಎಸ್.ಡಬ್ಲ್ಯೂ.ಡಿ) ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿ ರವರು ತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

07/07/2021

ಕಾರ್ಯದರ್ಶಿ, ವಾರ್ಡ್ ನಂ.174ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ
ಸಹಾಯಕ ಕಾರ್ಯಪಾಲಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6) ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7) ಕಛೇರಿ ಪ್ರತಿ.

Scanned with